# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ/1816/2021
ಮಂಡನಾಧಿಕಾರಿಗಳ ಶಾಖೆ ಎ.ಆರ್.ಇ.17

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 10/01/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀಮತಿ ಎಂ. ಪೂರ್ಣಿಮಾ, ಗ್ರಾಮ ಲೆಕ್ಕಾಧಿಕಾರಿಗಳು, ಕೆಂಬೋಡಿ ಕಂದಾಯ ವೃತ್ತ, ಪ್ರಭಾರ ಶಿಳ್ಳಂಗೆರೆ ಕಂದಾಯ ವೃತ್ತ, ಹುತ್ತೂರು ಹೋಬಳಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೋಲಾರ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ.) ಸಲ್ಲಿಸಿದ ತನಿಖಾ ವರದಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ನೌಕರರಾದ ಶ್ರೀಮತಿ ಎಂ. ಪೂರ್ಣಿಮಾ, ಗ್ರಾಮ ಲೆಕ್ಕಾಧಿಕಾರಿಗಳು, ಕೆಂಬೋಡಿ ಕಂದಾಯ ವೃತ್ತ, ಪ್ರಭಾರ ಶಿಳ್ಳಂಗೆರೆ ಕಂದಾಯ ವೃತ್ತ, ಹುತ್ತೂರು ಹೋಬಳಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ ಶ್ರೀ ಎ.ಎಂ. ವೆಂಕಟೇಶ ತಂದೆ ಮುನಿಯಪ್ಪ, ವಾಸ: ಅಬ್ಬಿಗಿರಿ ಹೊಸಹಳ್ಳಿ ಗ್ರಾಮ, ಹುಲಿಬೆಲೆ ಅಂಚೆ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರ ಮಾವನವರಾದ ಕೋಲಾರ ತಾಲ್ಲೂಕು ಶಿಳ್ಳಂಗೆರೆ ಗ್ರಾಮದ ವಾಸಿ ಬಂಡೂರು ಯಲ್ಲಪ್ಪರವರು ದಿನಾಂಕ 16/03/2014 ರಂದು ಮೃತಪಟ್ಟಿದ್ದು ಅವರು ತೀರಿಕೊಳ್ಳುವ ಮುಂಚೆ ಶಿಳ್ಳಂಗೆರೆ ಗ್ರಾಮದ ಸ. ನಂ. 349ರಲ್ಲಿ 1 ಎಕರೆ 13ವರೆ ಗುಂಟೆ, ಭಟ್ರ ಹಳ್ಳಿ ಗ್ರಾಮದ ಸ. ನಂ. 102 ರಲ್ಲಿ 0.35 ಗುಂಟೆ ಅದೇ ಗ್ರಾಮದ ಸ. ನಂ. 101/2 ರಲ್ಲಿ 1 ಎಕರೆ 9ವರೆ ಗುಂಟೆ ಜಮೀನುಗಳ ಆಸ್ತಿಯನ್ನು

ತಮ್ಮ ಮಕ್ಕಳ ಹೆಸರಿಗೆ ವಿಲ್ ಮಾಡಿದ್ದು ಅದರಂತೆ ಎಲ್ಲರೂ ಪೌತಿ ವಾರಸು ಖಾತೆ ಮೂಲಕ ಖಾತೆ ಬದಲಾವಣೆ ಮಾಡಿಕೊಡುವಂತೆ ಕೋರಿ ದೂರುದಾರರ ಕೊನೆಯ ನಾದಿನಿಯಾದ ಕುಮಾರಿ ಯಲ್ಲಮ್ಮರವರು ದಿನಾಂಕ 16/01/2019 ರಂದು ಕೋಲಾರ ತಾಲ್ಲೂಕು ಕಛೇರಿಯಲ್ಲಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ ಅರ್ಜಿಯನ್ನು ಮುಂದಿನ ಕ್ರಮಕ್ಕಾಗಿ ಶೆಳ್ಳಂಗೆರೆ ಕಂದಾಯ ವೃತ್ತದ ಗ್ರಾಮ ಲೆಕ್ಕಾಧಿಕಾರಿಯವರಿಗೆ ವರ್ಗಾಯಿಸಿದ್ದು, ಎದುರುದಾರರು ಸದರಿ ಕಂದಾಯ ವೃತ್ತದ ಗ್ರಾಮ ಲೆಕ್ಕಾಧಿಕಾರಿಯಾಗಿದ್ದು ಪೌತಿ ವಾರಸು ಖಾತೆ ಮಾಡಿಕೊಡಲು 25,000/- ರೂ.ಗಳ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ನಂತರ ಈ ಬಗ್ಗೆ ಚೌಕಾಶಿ ಮಾಡಿ 5,000/- ರೂಪಾಯಿ ಆದರೂ ಕೊಡಬೇಕೆಂದು ಲಂಚದ ಹಣಕ್ಕೆ ಒತ್ತಾಯ ಮಾಡಿದ್ದರಿಂದ ಸದರಿ ಲಂಚದ ಹಣವನ್ನು ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ಕೋಲಾರ ಜಿಲ್ಲೆ ಎ.ಸಿ.ಬಿ. ಪೋಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 28/06/2018 ರಂದು ನೀಡಿರುತ್ತಾರೆ. ಈ ಬಗ್ಗೆ ಕೋಲಾರ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 09/2018 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 28/06/2018 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಠಾಣೆಗೆ ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಎದುರುದಾರರು ಲಂಚದ ಹಣ ಕೇಳುವ ಬಗ್ಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದು ಸರ್ಕಾರಿ ಕೆಲಸ ನಿರ್ವಹಿಸಲು ಲಂಚದ ಹಣಕ್ಕೆ ಒತ್ತಾಯ ಮಾಡಿರುವುದಾಗಿ ತಿಳಿಸಿದ್ದು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಅದನ್ನು ಲಿಪೀಕರಣ ಮಾಡಿ ಅದನ್ನು ಸಿ.ಡಿ.ಗೆ ವರ್ಗಾಯಿಸಿದ್ದು ಇರುತ್ತದೆ. ನಂತರ ಲಂಚದ ಹಣ ರೂ. 5,000/- ಗಳನ್ನು ದೂರುದಾರರು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣಗಳಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣಗಳನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು

ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಸಂಭಾಷಣೆಯ ಸಿ.ಡಿ.ಯನ್ನೂ ಸಹ ವಶಪಡಿಸಿಕೊಂಡಿರುತ್ತಾರೆ. ಶ್ರೀ ದಯಾನಂದ ಸಾಗರ್ ಬಿ.ಎ. ಬಿನ್ ಲೇಟ್ ವಿ. ಆರ್ಮುಗಂ, ದ್ವಿ.ದ.ಸ. ಪ್ರಾದೇಶಿಕ ಸಾರಿಗೆ ಕಛೇರಿ, ಕೋಲಾರ ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ, ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ಮೊಬೈಲ್‌ನಲ್ಲಿ ತನ್ನ ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಣ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಬಲಗೈಯಿಂದ ತಲೆ ಸವರಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದಿನಾಂಕ 28/06/2018 ರಂದು ಎದುರುದಾರರ ಕೊಠಡಿಗೆ ಅಂದರೆ ಕೋಲಾರ ಟೌನ್‌ನ ಕೋಲಾರಮ್ಮ ದೇವಾಲಯದ ಮುಂಭಾಗದಲ್ಲಿರುವ ಎಸ್. ಜಿ. ನೂರ್ ಮಸೂದ್ ಷರೀಫ್ ಎಂಬುವವರಿಗೆ ಸೇರಿದ ಆರ್.ಸಿ.ಸಿ. ಕಟ್ಟಡದಲ್ಲಿನ ಎದುರುದಾರರ ಕೊಠಡಿಗೆ ಹೋದಾಗ ಕೊಠಡಿಯು ಬೀಗ ಹಾಕಿದ್ದು ಇರುತ್ತದೆ. ದೂರುದಾರರು ಮೊಬೈಲ್ ಮುಖಾಂತರ ಸಂಪರ್ಕಿಸಿದಾಗ ಎದುರುದಾರರು ಮೊಬೈಲ್ ಕರೆಯನ್ನು ಸ್ವೀಕರಿಸಿರುವುದಿಲ್ಲ. ಸ್ವಲ್ಪ ಸಮಯದ ನಂತರ ಎದುರುದಾರರು ಮತ್ತು ಒಬ್ಬ ಪುರುಷರು ಒಂದು ದ್ವಿಚಕ್ರ ವಾಹನದಲ್ಲಿ ಕೊಠಡಿಯ ಕಟ್ಟಡದ ಮುಂಭಾಗ ಬಂದಾಗ, ದೂರುದಾರರು ಎದುರುದಾರರ ಬಳಿ ಬಂದಾಗ ಎದುರುದಾರರು ಲಂಚದ ಹಣವನ್ನು ತಮ್ಮ ಜೊತೆಯಲ್ಲಿದ್ದ ಸಹಾಯಕನ ಬಳಿ ನೀಡುವಂತೆ ಸಂಜ್ಞೆ ಮಾಡಿರುತ್ತಾರೆ. ಎದುರುದಾರರ ಸೂಚನೆಯ ಮೇರೆಗೆ ಎದುರುದಾರರ ಸಹಾಯಕರ ಬಳಿ ರೂ. 5,000/- ಲಂಚದ ಹಣವನ್ನು ನೀಡಿದ್ದು ಸದರಿಯವರು ತಮ್ಮ ಎಡಗೈಯಿಂದ ಸ್ವೀಕರಿಸಿಕೊಂಡು, ಎರಡೂ ಕೈಗಳಿಂದ ಎಣಿಸಿ ತಮ್ಮ ಶರ್ಟಿನ ಎಡ ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ನೀಡಿದ ಸೂಚನೆಯಂತೆ ದೂರುದಾರರು ತನ್ನ ಬಲಗೈನಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ.

ತನಿಖಾಧಿಕಾರಿಗಳು ಎದುರುದಾರರಿಗೆ ಹಾಗೂ ಅವರ ಸಹಾಯಕರಾದ ಶ್ರೀ ಭೀಮೇಶ್ ಬಿ.ಎಂ. ಬಿನ್ ಮುನಿವೆಂಕಟಪ್ಪ ಇವರಿಗೆ ತಮ್ಮ ಗುರುತಿನ ಚೀಟಿ ತೋರಿಸಿ, ತಮ್ಮ, ಪಂಚರ ಹಾಗೂ ಸಿಬ್ಬಂದಿಯವರ ಪರಿಚಯ ನೀಡಿ ಎದುರುದಾರರಿಗೆ ದೂರಿನ ವಿಷಯ ತಿಳಿಸಿ ತನಿಖೆಗೆ ಸಹಕರಿಸಬೇಕೆಂದು ಸದರಿಯವರಿಗೆ ಕೋರಿಕೊಂಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ಲಂಚದ ಹಣ ಸ್ವೀಕರಿಸಿದವರನ್ನು ವಿಚಾರಿಸಿದಾಗ ಅವರು ಎದುರುದಾರರ ಸಹಾಯಕರಾದ ಶ್ರೀ ಭೀಮೇಶ್ ಬಿ.ಎಂ. ಬಿನ್ ಮುನಿವೆಂಕಟಪ್ಪ ಎಂದು ತಿಳಿದು ಬಂದಿರುತ್ತದೆ. ಲಂಚದ ಹಣವನ್ನು ಬೇಡಿಕೆ ಇಟ್ಟ ಎದುರುದಾರರನ್ನು ದೂರುದಾರರು ತೋರಿಸಿರುತ್ತಾರೆ. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಸದರಿ ಲಂಚದ ಹಣವಾದ 5,000/- ರೂ.ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳ ಸಂಖ್ಯೆ ಮತ್ತು ಮೌಲ್ಯ ವಹಿಸಿಕೊಡುವ ಪಂಚನಾಮೆ ಕಾಲದಲ್ಲಿ ನಮೂದಿಸಿದ ನೋಟುಗಳ ಸಂಖ್ಯೆ ಮತ್ತು ಮೌಲ್ಯಗಳಿಗೆ ತಾಳೆಯಾಗಿದ್ದು ಇರುತ್ತದೆ. ತನಿಖಾಧಿಕಾರಿಯವರು ಸೋಡಿಯಂ ಕಾರ್ಬೋನೇಟ್ ದ್ರಾವಣಗಳನ್ನು ತಯಾರಿಸಿ, ಎದುರುದಾರರ ಸಹಾಯಕರಾದ ಶ್ರೀ ಭೀಮೇಶ್ ಬಿ.ಎಂ. ಬಿನ್ ಮುನಿವೆಂಕಟಪ್ಪ ರವರ ಎರಡೂ ಕೈ ಬೆರಳುಗಳನ್ನು ಸದರಿ ದ್ರಾವಣಗಳಲ್ಲಿ ಅದ್ದಿ ತೊಳೆದಾಗ ದ್ರಾವಣಗಳು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಎದುರುದಾರರ ಸಹಾಯಕರಾದ ಶ್ರೀ ಭೀಮೇಶ್ ಬಿ.ಎಂ. ಬಿನ್ ಮುನಿವೆಂಕಟಪ್ಪ ರವರಿಗೆ ಬದಲಿ ಶರ್ಟಿನ ವ್ಯವಸ್ಥೆಯನ್ನು ಮಾಡಿ ಅವರ ಶರ್ಟನ್ನು ಬಿಚ್ಚಿಸಿಕೊಂಡು ಶರ್ಟಿನ ಬಲ ಭಾಗದ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಪಂಚರ ಸಮಕ್ಷಮ ದ್ರಾವಣಗಳನ್ನು ಹಾಗೂ ಶರ್ಟನ್ನು ಅಮಾನತ್ ಪಡಿಸಿಕೊಂಡಿರುತ್ತಾರೆ. ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಶ್ರೀ ದಯಾನಂದ ಸಾಗರ ಬಿ.ಎ ಬಿನ್ ವಿ. ಆರ್ಮುಗಂ, ಸಹ ಪಂಚ ಅವರಿಂದ ಅಲ್ಲಿಯ ನಡುವಳಿಕೆಗಳನ್ನು ಕೇಳಿ ತಿಳಿದುಕೊಂಡಿರುತ್ತಾರೆ. ಎದುರುದಾರರ ಮತ್ತು ದೂರುದಾರರ ಮಧ್ಯೆ ದೂರು ನೀಡುವ ಪೂರ್ವದಲ್ಲಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಡಾಟಾ ಕೇಬಲ್ ಮುಖಾಂತರ ಸಿ.ಡಿ.ಗೆ ವರ್ಗಾಯಿಸಿ ಅದನ್ನು ಎದುರುದಾರರಿಗೆ ಮತ್ತು ಇನ್ನೊಬ್ಬ ವ್ಯಕ್ತಿಯ ಜೊತೆ ನಡೆಸಿದ ಸಂಭಾಷಣೆ ಇದನ್ನು ಕೇಳಿಸಿ, ಲಿಪೀಕರಣ ಮಾಡಿ ಸಿ.ಡಿ.ಗೆ ವರ್ಗಾಯಿಸಿದ್ದು ಇರುತ್ತದೆ. ಸದರಿ ಸಂಭಾಷಣೆಯನ್ನು ಎದುರುದಾರರ ಮೇಲಾಧಿಕಾರಿಯವರಾದ ಶ್ರೀ ಎಂ. ಕೆ. ರಮೇಶ, ತಹಶೀಲ್ದಾರ್, ಕೋಲಾರ ಇವರನ್ನು ಸ್ಥಳಕ್ಕೆ ಬರ ಮಾಡಿಕೊಂಡು ಘಟನೆ ಬಗ್ಗೆ ಸವಿಸ್ತಾರ

ಮಾಹಿತಿ ತಿಳಿಸಿ, ದೂರು ನೀಡುವ ಪೂರ್ವದಲ್ಲಿ ದೂರುದಾರ, ಎದುರುದಾರ ಹಾಗೂ 3 ನೇ ವ್ಯಕ್ತಿಯ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮುಖಾಂತರ ಸಿ.ಡಿ.ಗೆ ಹಾಕಿಸಿ ಕೇಳಿಸಲಾಗಿ ಅದರಲ್ಲಿ ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ದೂರುದಾರರ ನಾದಿನಿ ನೀಡಿದ ಅರ್ಜಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ತಹಶೀಲ್ದಾರ್‌ರವರ ಮುಖೇನ ಪಡೆದುಕೊಂಡು ಪರಿಶೀಲಿಸಿ ಅವುಗಳ ಜೆರಾಕ್ಸ್ ದೃಢೀಕೃತ ನಕಲುಗಳನ್ನು ತನಿಖಾಧಿಕಾರಿಗಳು ಪಡೆದಿರುತ್ತಾರೆ. ತನಿಖಾಧಿಕಾರಿಗಳು ಈ ಘಟನೆಯ ಬಗ್ಗೆ ಎದುರುದಾರರಿಗೆ ಸಮಜಾಯಿಷಿಯನ್ನು ನೀಡುವಂತೆ ಸೂಚಿಸಿರುತ್ತಾರೆ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರು ಗ್ರಾಮ ಸಹಾಯಕನಿಗೆ ಕೆಲಸದ ಬಗ್ಗೆ ಮುತುವರ್ಜಿ ತೆಗೆದುಕೊಂಡು ಆದಷ್ಟು ಬೇಗ ಖಾತೆ ಮಾಡಿಕೊಡಿ ಎಂದಿರುತ್ತಾರೆ. ಆದರೆ ಬೇಕಾಗಿ ಹಣವನ್ನು ಬೇಡವೆಂದರೂ ದ್ವಿ ಚಕ್ರ ವಾಹನದ ಕವರಿನಲ್ಲಿ ಇಟ್ಟಿರುತ್ತಾರೆ. ಇದರಲ್ಲಿ ನನ್ನ ಹಾಗೂ ನನ್ನ ಗ್ರಾಮ ಸಹಾಯಕನ ತಪ್ಪು ಇರುವುದಿಲ್ಲವೆಂದು ವಿನಂತಿಸಿಕೊಳ್ಳುತ್ತಿದ್ದೇನೆ ಹಾಗೂ ಸದರಿ ದೂರಿನಿಂದ ನಮ್ಮನ್ನು ವಿಮುಕ್ತಿಗೊಳಿಸಲು ಕೋರಿ ಕೊಳ್ಳುತ್ತೇನೆ" ಎಂದು ಪ್ರತಿರಕ್ಷಣಾ ಹೇಳಿಕೆಯನ್ನು ತನಿಖಾಧಿಕಾರಿಯವರ ಮುಂದೆ ನೀಡಿರುತ್ತಾರೆ. ಎದುರುದಾರರ ಸಹಾಯಕನಾದ ಶ್ರೀ ಭೀಮೇಶ್ ಬಿ.ಎಂ. ಬಿನ್ ಮುನಿವೆಂಕಟಪ್ಪ ಇವರು ತಮ್ಮ ಸಮಜಾಯಿಷಿಯಲ್ಲಿ "ನಾನು ಮತ್ತು ಮೇಡಂ ಪೂರ್ಣಿಮಾ ರವರು ಗಾಡಿನಲ್ಲಿ ಬಂದಾಗ ವೆಂಕಟಪ್ಪರವರು 5,000/- ರೂ.ಗಳನ್ನು ಗಾಡಿಯ ಕವರ್‌ನೊಳಗೆ ಇಟ್ಟು ನನ್ನ ಕೆಲಸ ಮುಗಿಸಿಕೊಡಿ ಎಂದು ಹೇಳಿ ಹೋಗಿರುತ್ತಾರೆ. ಅದು ಯಾವುದು ವಿಚಾರವಾಗಿ 5 ಸಾವಿರ ಗಾಡಿಯ ಕವರಲ್ಲಿ ಇಟ್ಟಿದ್ದಾರೆ ನನಗೆ ಗೊತ್ತಿಲ್ಲ. ಆದ್ದರಿಂದ ನಾನು ಮತ್ತು ಪೂರ್ಣಿಮಾ ಮೇಡಂ ರವರು ಯಾವುದೇ ತಪ್ಪು ಮಾಡಿರುವುದಿಲ್ಲ" ಎಂದು ಸಮಜಾಯಿಷಿ ನೀಡಿರುತ್ತಾರೆ. ಜಪ್ತಿ ಪಂಚನಾಮೆಯ ಪ್ರಕ್ರಿಯೆಗೂ ಎದುರುದಾರರು ನೀಡಿರುವಂತಹ ಸಮಜಾಯಿಷಿಗೂ ವ್ಯತಿರಿಕ್ತ ಹೇಳಿಕೆಗಳಾಗಿವೆ. ಆದ್ದರಿಂದ ಸದರಿ ಸಮಜಾಯಿಷಿಯು ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಆಗಿರುವುದಿಲ್ಲ. ಸದರಿ ಜಪ್ತಿ ಪಂಚನಾಮೆಯನ್ನು ಸಂಜೆ 5-30 ರಿಂದ ರಾತ್ರಿ 10-30 ರ ವರೆಗೆ ತನಿಖಾಧಿಕಾರಿಗಳು ನಿರ್ವಹಿಸಿರುತ್ತಾರೆ.

5) ಎದುರುದಾರರಾದ ಪೂರ್ಣಿಮಾರವರು ನಂತರ ಹಣ ಬೇಡಿಕೆ ಇಟ್ಟಿರುವ ಬಗ್ಗೆ ದೂರುದಾರರ ಬಳಿ ಇದ್ದ ವಿವೋ ಕಂಪನಿಯ ಮೊಬೈಲ್‌ನಲ್ಲಿ ಧ್ವನಿ ಮುದ್ರಿತವಾಗಿದ್ದು ನೆರಳು ಸಾಕ್ಷಿ, ಸಹ ಪಂಚ ಮತ್ತು ಶ್ರೀ ರಮೇಶ್ ಬಿನ್ ಕೃಷ್ಣಾ ನಾಯ್ಕ, ತಹಶೀಲ್ದಾರರು, ತಾಲ್ಲೂಕು ಮತ್ತು ಜಿಲ್ಲೆ ಕೋಲಾರ, ಇವರು ಆಲಿಸಿದ ಹಿಂದಿನ ಸಂಭಾಷಣೆಯು

ಎದುರುದಾರರಾದ ಶ್ರೀಮತಿ ಪೂರ್ಣಿಮಾರವರಿದ್ದು ಎಂದು ಗುರುತಿಸಿ ದೃಢಪಡಿಸಿರುತ್ತಾರೆ. ಇದರಿಂದಲೂ ಸಹ ಎದುರುದಾರರು ಲಂಚವನ್ನು ಅಪೇಕ್ಷಿಸಿರುವುದು ದೃಢಪಟ್ಟಿರುತ್ತದೆ.

6) ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

8) ಧ್ವನಿ ವಿಶ್ಲೇಷಣಾ ವರದಿ, ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಬಂದಿರುವುದಿಲ್ಲ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

9) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 12/11/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ದೂರುದಾರರಿಂದ "ಕೋಲಾರ ಎಸಿಬಿ ಠಾಣೆಯಲ್ಲಿ ಗುನ್ನೆ ನಂ. 09/2018 ರ ಪ್ರಕರಣ ನೋಂದಣಿ ಆಗಿರುತ್ತದೆ ಎಂಬುದು ಸಹಜ ನಡವಳಿಕೆ ಆಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಸಂಪೂರ್ಣವಾಗಿ ನಿರಾಕರಿಸಿರುತ್ತೇನೆ" ಎಂದು ಪ್ರತಿಯೊಂದು ಕಂಡಿಕೆಯ ವಿಷಯವನ್ನು ನಿರಾಕರಿಸಿರುತ್ತಾರೆ. ಮುಂದುವರೆದು "ಈಗಾಗಲೇ ಜಿಲ್ಲಾಧಿಕಾರಿ ಕೋಲಾರರವರು ಕೆ.ಸಿ.ಎಸ್.(ಸಿ.ಸಿ.ಎ) ರೂಲ್ಸ್ 1957 ರ ನಿಯಮ 11 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ದೋಷಾರೋಪಣಾ ಪತ್ರ ನೀಡಿ ನನ್ನಿಂದ ಸಮಜಾಯಿಷಿ ಪಡೆದು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿ ವಿಚಾರಣಾಧಿಕಾರಿಗಳನ್ನು ನೇಮಿಸಿರುತ್ತಾರೆ" ಎಂಬುದಾಗಿಯೂ ಹಾಗೂ ದೋಷಾರೋಪಣಾ ಪತ್ರದ ಪ್ರತಿ (ಅನುಬಂಧ 1 ರಿಂದ 4 ಮತ್ತು ನಿಯಮ 11 ರ ಅಡಿ) ವಿಚಾರಣೆಗೆ ಆದೇಶಿಸಿ ವಿಚಾರಣಾಧಿಕಾರಿ ಮಂಡನಾಧಿಕಾರಿಯನ್ನು ನೇಮಿಸಿರುವ ಪ್ರತಿಯನ್ನು ತಮ್ಮ ಸಮಜಾಯಿಷಿ ಜೊತೆ ಲಗತ್ತಿಸಿರುವುದಾಗಿ ಸಮಜಾಯಿಷಿಯ 12ನೇ ಪಂಕ್ತಿಯಲ್ಲಿ ಉಲ್ಲೇಖಿಸಿರುತ್ತಾರೆ. ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಶಿಸ್ತು ಪ್ರಾಧಿಕಾರಿ, ಕೋಲಾರ ಜಿಲ್ಲೆ, ಕೋಲಾರ ಇವರು ಇಲಾಖಾ ವಿಚಾರಣೆಗೆ ಹೊರಡಿಸಿದ ಆದೇಶ ಸಂಖ್ಯೆ ಸಿಸಿಎ/ಸಿಆರ್/06/2020-21, ದಿನಾಂಕ 18/09/2021 ರ ಜೆರಾಕ್ಸ್ ಪ್ರತಿ, ಕಾರಣ ಕೇಳಿ ನೋಟೀಸಿನ ಪ್ರತಿ, ಅನುಬಂಧ 1 ರಿಂದ 4 ರ ಜೆರಾಕ್ಸ್ ಪ್ರತಿಗಳನ್ನು ತಮ್ಮ ಸಮಜಾಯಿಷಿಯ ಜೊತೆ ಸಲ್ಲಿಸಿರುತ್ತಾರೆ. ಆದರೆ ಎದುರುದಾರರು ಸದರಿ ದಾಖಲಾತಿಗಳ ದೃಢೀಕೃತ

ದಾಖಲಾತಿಗಳನ್ನು ನಂತರ ಸಲ್ಲಿಸಿರುತ್ತಾರೆ. ಆದರೆ ಅಂತಿಮ ಆದೇಶ ಆಗಿರುವುದು ಕಂಡುಬರುವುದಿಲ್ಲ.

10) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

11) ಆದ್ದರಿಂದ, 1 ಮತ್ತು 2ನೇ ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದೂ ಕೋರಿದೆ.

12) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18-1-22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.